ದಿನಾಂಕ : 29-08-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು:ಆರೋಪಿ ಪರ ಶ್ರೀ. ಎ.ಸಿ.ಕೆ ವಕೀಲರಿಂದ**

42. ಆರೋಪಿಯ ತಂದೆಯನ್ನು ಮಾತ್ರ ನಾನು ಒಂದು ಸಾರಿ ಭೇಟಿ ಮಾಡಿದ್ದೇನೆ. ಅವರ ತಾಯಿಯನ್ನು ನಾನು ಭೇಟಿ ಮಾಡಿರುವುದಿಲ್ಲ. ನನ್ನ ಜಾತಿ ಬಗ್ಗೆ ಆರೋಪಿಗೆ ಮಾತ್ರ ತಿಳಿದಿತ್ತು, ಅವರ ತಂದೆ ತಾಯಿಗೆ ತಿಳಿದಿರಲಿಲ್ಲ.

43. ರಾಮಜಿ ಅವರು ನನ್ನ ತಂದೆಗೆ ಯಾವಾಗ ಪೋನ ಮಾಡಿ ಮಾತನಾಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನಾನು ದೂರನ್ನು ಬೆಳಗ್ಗೆ 10:00 ರಿಂದ 11:00 ಗಂಟೆ ಸಮಯದಲ್ಲಿ ನೀಡಿದ್ದೇನೆ ಎಂದು ಹೇಳಿ ಸಾಕ್ಷಿ ಪುನಃ 11:00 ಗಂಟೆ ಎಂದು ಹೇಳಿದ್ದಾರೆ. ಆ ದಿನ ಸಂಜೆವರೆಗೂ ನಾವು ಪೋಲಿಸ ಠಾಣೆಯಲ್ಲಿಯೇ ಇದ್ದೇವು. ನಾನು ಪೋಲಿಸ ಠಾಣೆಗೆ ವಾರದಲ್ಲಿ 2-3 ಸಾರಿ ಹೋಗುತ್ತಿದ್ದೇನು. ಯಾವ ಕಾರಣಕ್ಕೆ ಹೋಗುತ್ತಿದ್ದೀರಿ ಎನ್ನುವುದಕ್ಕೆ ಸಾಕ್ಷಿ ದೂರಿನ ಬಗ್ಗೆ ವಿಚಾರಿಸಲು ಹೋಗುತ್ತಿದ್ದೆ ಎಂದು ಹೇಳಿದ್ದಾರೆ.

44. ದಿನಾಂಕಃ 14-12-2023 ರಂದು ಪೋಲಿಸರು ದಿನಾಂಕಃ15-12-2023 ರಂದು ನೊಂದಣಿ ಮಾಡಿದ್ದಾರೆ. ಈ ವಿಚಾರದಲ್ಲಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿದ್ದೇನೆ ಎನ್ನುವುದು ಸರಿಯಲ್ಲ.

ಪ್ರಶ್ನೆಃ ಯಾವ ದಿನಾಂಕದಂದು ಪೋಲಿಸರು ನಿಮ್ಮನ್ನು ಪಂಚನಾಮೆ ಮಾಡಲು ಕರೆದುಕೊಂಡು ಹೋಗಿದ್ದರು?

ಉತ್ತರಃ ದಿನಾಂಕಃ 12-03-2024 ರಂದು ಪೋಲಿಸರು ನನ್ನನ್ನು ಪಂಚನಾಮೆ ಮಾಡುವ ಸಲುವಾಗಿ ಕರೆದುಕೊಂಡು ಹೋಗಿದ್ದರು.

45. ಪೋಲಿಸರು ನಿಮ್ಮನ್ನು ಎಲ್ಲಿಗೆ ಕರೆಸಿದ್ದರು ಎನ್ನುವುದಕ್ಕೆ ಸಾಕ್ಷಿ ವಡಗಾಂವ ಪೋಲಿಸ ಠಾಣೆಗೆ ಕರೆಸಿದ್ದರು ಎಂದು ಹೇಳಿದ್ದಾರೆ. ಮಧ್ಯಾಹ್ನ 2:00 ಗಂಟೆ ಸಮಯಕ್ಕೆ ನಾನು ಪೋಲಿಸ ಠಾಣೆಗೆ ಹೋಗಿದ್ದೇನು.

46. ಪೋಲಿಸ ಠಾಣೆಯಲ್ಲಿ ನಾವು 5 ನಿಮಿಷ ಇದ್ದೇವು, ನಂತರ ಪಂಚನಾಮೆ ಮಾಡಲು ಪೀರಣವಾಡಿಗೆ ಹೋದೇವು. ನಾನು ಪೋಲಿಸ ಠಾಣೆಗೆ ಹೋದಾಗ ನನ್ನೊಂದಿಗೆ ನಮ್ಮ ತಾಯಿ ಮತ್ತು ಸಾಕ್ಷಿದಾರರು ಇದ್ದರು. ಪಂಚಸಾಕ್ಷಿದಾರರು ನಾವು ಪೋಲಿಸ ಠಾಣೆಗೆ ಹೋಗುವ ಮೊದಲೇ ಠಾಣೆಯಲ್ಲಿಯೇ ಇದ್ದರು.

47. ಪೋಲಿಸ ಠಾಣೆಯಲ್ಲಿ ನಾನು ಇದ್ದ ಸಮಯದಲ್ಲಿ ಡಿ.ವೈ.ಎಸ್.ಪಿ, ಪೋಲಿಸರು, ನಾನು ಮತ್ತು ನಮ್ಮ ತಾಯಿ, ಸಾಕ್ಷಿದಾರರಾದ ನಾಗನಗೌಡ ಶಂಕರಗೌಡ ಪಾಟೀಲ, ಉಡಚಪ್ಪ ಪರಮೇಶ್ವರಪ್ಪ ಪಾರ್ವತಮ್ಮನವರ ಇದ್ದೇವು. ಪಂಚಸಾಕ್ಷಿದಾರರೊಂದಿಗೆ ನಾವು ಮಾತುಕತೆ ಮಾಡಿರುವುದಿಲ್ಲ.

48. ಪಂಚನಾಮೆಗೆ ಪೋಲಿಸ ಠಾಣೆಯಲ್ಲಿ ಸಹಿ ಪಡೆದುಕೊಂಡಿದ್ದಾರೆ ಎನ್ನುವುದು ಸರಿ. ಪಂಚನಾಮೆಯನ್ನು ನಾನು ಓದಿಕೊಂಡಿರುವುದಿಲ್ಲ ಎನ್ನುವುದು ಸರಿ. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿ. ನಾನು ಪಂಚನಾಮೆಗೆ ಪಾರ್ಲೆ ಊರಿಗೆ, ಸೆಂಟ್ರಲ್ ಬಸ್ ನಿಲ್ದಾಣ ಬೆಳಗಾವಿ ಹಾಗೂ ಪೀರಣವಾಡಿಗೆ ಹೋಗಿಲ್ಲ, ಪೋಲಿಸರು ಈಗ ಹೇಳಿದ ಸ್ಥಳಗಳಲ್ಲಿ ಪಂಚನಾಮೆ ಮಾಡಿಲ್ಲ ಎನ್ನುವುದು ಸರಿಯಲ್ಲ.

49. ಪೋಟೋಗಳು ಸಾಮಾನ್ಯವಾಗಿ ಮೊಬೈಲ ಮೆಮೋರಿ ಕಾರ್ಡನಲ್ಲಿ, ಹ್ಯಾಂಡಸೆಟ್ ನಲ್ಲಿ ಸಂಗ್ರಹವಾಗಿರುತ್ತವೆ ಎನ್ನುವುದು ಸರಿ. ಪೋಲಿಸರು ನನ್ನ ಮೊಬೈಲ ಪೋನನ್ನು, ಎಸ್.ಡಿ ಕಾರ್ಡನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ದಿನಾಂಕಃ 15-12-2023 ರಂದು ನಾನು ಪೋಲಿಸರಿಗೆ ಪೋಟೋಗಳನ್ನು ನೀಡಿದ್ದೇನೆ ಎಂದು ಹೇಳಿದ್ದಾರೆ.

50. ನಿಪಿ-9 ರಲ್ಲಿರುವ 4 ಪೋಟೋಗಳನ್ನು ಪ್ರಕರಣಕ್ಕಾಗಿ ನಾನು ಸೃಷ್ಟಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

51. ನಾನೇ ಸ್ವತಃ ಮನೆ ಬಿಟ್ಟು ಹೋಗಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ ವಾಟರಮೆನ್ ಕೆಲಸ ಮಾಡುತ್ತಿದ್ದು, ಆತನಿಗೆ ಹೆಚ್ಚು ಸಂಬಳ ಬರುತ್ತದೆ ಎನ್ನುವ ಕಾರಣಕ್ಕೆ ಆರೋಪಿ ನನ್ನನ್ನು ಪ್ರೀತಿ ಮಾಡುತ್ತಿದ್ದಾನೆ ಎಂದು ಈಗ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ ನನಗೆ ಮದುವೆ ಮಾಡಿಕೊಳ್ಳುವುದಿಲ್ಲ ನೀನು ಕೀಳು ಜಾತಿಯವಳು ಎಂದು ನನ್ನನ್ನು ಮದುವೆ ಆಗಲು ತಿರಸ್ಕಾರ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

52. ಆರೋಪಿಗೆ ನಾನು ನನ್ನನ್ನು ಮದುವೆ ಮಾಡಿಕೊ ಅಂತಾ ಹೇಳಿದ್ದು, ಆತನು ಮದುವೆ ವಿಷಯವನ್ನು ಇಲ್ಲಿಗೆ ಬಿಟ್ಟುಬಿಡು, ಕೇಸ ಅಥವಾ ಕಂಪ್ಲೇಂಟ್ ಅಂತಾ ಮುಂದುವರೆಸಿದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ನನಗೆ ಜೀವದ ಬೆದರಿಕೆ ಹಾಕಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

53. ಆರೋಪಿಗೆ ನನ್ನ ಜಾತಿಯ ಬಗ್ಗೆ ಗೊತ್ತಿರುವುದಿಲ್ಲ ಎನ್ನುವುದಕ್ಕೆ ಸಾಕ್ಷಿ ಆರೋಪಿಯು ನನ್ನನ್ನು 3 ವರ್ಷದಿಂದ ಪ್ರೀತಿ ಮಾಡಿದ್ದಾನೆ ಎಂದು, ಆತನಿಗೆ ನನ್ನ ಜಾತಿಯ ಬಗ್ಗೆ ಗೊತ್ತಿರುತ್ತದೆ ಎಂದು ಹೇಳಿದ್ದಾರೆ.

54. ನಾನು ಬೆಳಗಾವಿಯಲ್ಲಿರುವ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಸುಳ್ಳು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯು ನಾನು ಸತ್ಯವನ್ನು ಹೇಳಿದ್ದೇನೆ ಎಂದು ಹೇಳಿದ್ದಾರೆ. ಈ ಪ್ರಕರಣಕ್ಕಾಗಿ ಪೋಟೋಗಳನ್ನು ಸೃಷ್ಟಿ ಮಾಡಲಾಗಿದೆ ಎನ್ನುವುದು ಸರಿಯಲ್ಲ. ಆರೋಪಿ ನನ್ನನ್ನು ಎಂದಿಗೂ ಪ್ರೀತಿ ಮಾಡಿಲ್ಲ, ಮದುವೆ ಮಾಡಿಕೊಳ್ಳುತ್ತೇನೆ ಎಂದು ಆಶ್ವಾಸನೆ ನೀಡಿರಲಿಲ್ಲ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.